ವಿಷಯ:- 1995-96ನೇ ಸಾಲಿನಲ್ಲಿ ಕೈಗಾರಿಕೆಗಳಲ್ಲಿ ವಿದೇಶಿ ಬಂಡವಾಳ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 514 (1119)

ಶ್ರೀ ಡಿ.ಆರ್.ಪಾಟೀಲ್ (ಗದಗ್):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1995-96ನೇ ಹಣಕಾಸು ವರ್ಷದಲ್ಲಿ ಮಂಜೂರಾದ ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳು ಯಾವುವು?

ಆ) ಮಂಜೂರಾಗಿರುವ ಈ ಕೈಗಾರಿಕೆಗಳಲ್ಲಿ ಎಷ್ಟು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿವೆ ಹಾಗೂ ಎಷ್ಟು ಕಾರ್ಖಾನೆಗಳು ನಿರ್ಮಾಣ ಹಂತದಲ್ಲಿವೆ.

ಇ) ಈ ಕೈಗಾರಿಕೆಗಳಲ್ಲಿ ವಿದೇಶ ಬಂಡವಾಳ ಹೂಡಿಕೆ ಎಷ್ಟು ಹಾಗೂ ಅದು ಒಟ್ಟು ಬಂಡವಾಳದ ಎಷ್ಟು ಪ್ರಮಾಣವಾಗಬಹುದು?

ಈ) ಈ ಕೈಗಾರಿಕೆಗಳಿಗೆ ಬೇಕಾಗುವ ಒಟ್ಟು ವಿದ್ಯುತ್ ಯೂನಿಟ್‌ಗಳೆಷ್ಟು ಇದರಲ್ಲಿ ಕೈಗಾರಿಕೆಗಳು ಎಷ್ಟು ಕ್ಯಾಪ್ಟಿವ್ ವಿದ್ಯುತ್ ಉತ್ಪಾದಿಸುವುವು?

ಉ) ಈ ಕೈಗಾರಿಕೆಗಳು ನಿರ್ಮಿಸುವ ಉದ್ಯೋಗಾವಕಾಶಗಳು ಎಷ್ಟು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) 1995-96ನೇ ಸಾಲಿನಲ್ಲಿ ಒಟ್ಟು 175 ಕೈಗಾರಿಕೆಗಳನ್ನು ಉನ್ನತ ಮಟ್ಟದ ಹಾಗೂ ಏಕ ಗವಾಕ್ಷಿ ಸಭೆ ವತಿಯಿಂದ ಮಂಜೂರಾತಿ ನೀಡಲಾಗಿದೆ.

ಆ) ಮಂಜೂರಾದ ಕೈಗಾರಿಕೆಗಳ ಅನುಷ್ಠಾನದ ಕಾರ್ಯವು ಇನ್ನೂ ವಿವಿಧ ಹಂತದಲ್ಲಿವೆ, ಪೂರ್ಣವಾಗಿ ಸ್ಥಾಪನೆಗೊಂಡ ಕೈಗಾರಿಕೆಗಳು ಯಾವುದು ಇಲ್ಲ.

ಇ) ಈ ಒಟ್ಟು 175 ಕೈಗಾರಿಕೆಗಳಲ್ಲಿ 22 ಕೈಗಾರಿಕೆಗಳು ವಿದೇಶಿ ಬಂಡವಾಳ ಹೊಂದಿರುತ್ತದೆ. ಇದರ ಒಟ್ಟು ಮೊತ್ತ ರೂ.5152.15 ಲಕ್ಷ ರೂ.ಗಳು ಇದ್ದು ಇದು ಬಂಡವಾಳದ ಒಟ್ಟು ಶೇ.3.47ರಷ್ಟಾಗುತ್ತದೆ.

ಈ) ಈ ಕೈಗಾರಿಕೆಗಳಿಗೆ ಒಟ್ಟು 1148.48 ಎಂ.ವಿ.ಎ ವಿದ್ಯುತ್ ಬೇಕಾಗುವುದು ಮತ್ತು ಈ ಕೈಗಾರಿಕೆಗಳ ಒಟ್ಟು 902.53 ಎಂ.ವಿ.ಎ. ಕ್ಯಾಪ್ಟಿವ್ ವಿದ್ಯುತ್ ಉತ್ಪಾದಿಸುವುದು.

ಉ) ಈ ಕೈಗಾರಿಕೆಗಳು ಒಟ್ಟು 72581 ಜನರಿಗೆ ಉದ್ಯೋಗವನ್ನು ಕಲಿಸುತ್ತದೆ.

ವಿಷಯ:- ಉಡುಪಿಯಲ್ಲಿ ರೋಜ್‌ಗಾರ್ ಯೋಜನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 515 (847)

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ರೋಜ್‌ಗಾರ್ ಯೋಜನೆಯಲ್ಲಿ 28.6.96ರಂದು ನಡೆದ ಸಂದರ್ಶನಕ್ಕೆ ಬಂದ ಅರ್ಜಿಗಳೆಷ್ಟು?

ಆ) ಅದರಲ್ಲಿ ಆಯ್ಕೆಯಾದವರ ಸಂಖ್ಯೆ ಎಷ್ಟು (ಯುವತಿಯರ ಮತ್ತು ಯುವಕರ ಪ್ರತ್ಯೇಕ ವಿವರ ನೀಡುವುದು)

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):-

ಅ) ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಗೆ ಸಂಬಂಧಿಸಿದಂತೆ ಸಂದರ್ಶನಕ್ಕೆ ಬಂದ ಅರ್ಜಿಗಳು : 400

ಯುವಕರು : 388

ಯುವತಿಯರು : 12

ಆ) ಇದರಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಒಟ್ಟು: 213

ಯುವಕರು : 211

ಯುವತಿಯರು : 02

ವಿಷಯ:- ರೋಜ್‌ಗಾರ್ ಯೋಜನೆಯಲ್ಲಿ ನಡೆದ ಸಂದರ್ಶನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 516 (846)

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ರೋಜ್‌ಗಾರ್ ಯೋಜನೆಯಲ್ಲಿ 22.6.96ರಂದು ನಡೆದ ಸಂದರ್ಶನಕ್ಕೆ ಬಂದ ಅರ್ಜಿಗಳೆಷ್ಟು (ಯುವಕರು ಮತ್ತು ಯುವತಿಯರ ಸಂಖ್ಯೆ ತಿಳಿಸುವುದು)

ಆ) ಇದರಲ್ಲಿ ಆಯ್ಕೆಯಾದವರ ಸಂಖ್ಯೆ ಎಷ್ಟು (ಯುವತಿಯರ ಮತ್ತು ಯುವಕರ ಪ್ರತ್ಯೇಕ ವಿವರ ನೀಡುವುದು)

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):-

ಅ) ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಗೆ ಸಂಬಂಧಿಸಿದಂತೆ ಸಂದರ್ಶನಕ್ಕೆ ಬಂದ ಅರ್ಜಿಗಳು - 226